– –

**ಅಸಲು ದಾವಾ ನಂಃ178/2021**

ಪಿ.ಡಬ್ಲ್ಯೂಃ02

**<u>ದಿನಾಂಕಃ22-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಜಿ ಸಿ ಎಂ., ಪ್ರತಿವಾದಿ ಪರ ವಕೀಲರಿಂದ</u>**

ನಾನು ಕೂಲಿಕೆಲಸ ಮಾಡುತ್ತೇನೆ. ನನಗೆ ಸೇರಿದ ಎತ್ತುಗಳು ಇವೆ. ಸದರಿ ದಾವೆಯನ್ನು ಉಜ್ಜಿನಪ್ಪರವರು ದೊಡ್ಡಗೌಡರ ಕೆಂಚಣ್ಣರವರ ವಿರುದ್ದ ಹೂಡಿರುತ್ತಾರೆ. ವ್ಯಾಜ್ಯದ ಜಮೀನನ್ನು ನೋಡಿರುತ್ತೇನೆ. ಸದರಿ ಜಮೀನಿನ ಸರ್ವೇ ನಂ.23/2 ಆಗಿರುತ್ತದೆ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ದಾವಾ ಸ್ವತ್ತಿನ ಒಟ್ಟಾರೆ ವಿಸ್ತೀರ್ಣ 29 ಎಕರೆ 21 ಗುಂಟೆ ಆಗಿರುತ್ತದೆ. ದಾವಾ ಸ್ವತ್ತಿನ ಚೆಕ್ ಬಂದಿ ಹೇಳಲು ಆಗುವುದಿಲ್ಲ. ದಾವಾ ಸ್ವತ್ತು ವಾದಿ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿಯು ಉಜ್ಜಿನಪ್ಪರವರ ಅಣ್ಣ ತಮ್ಮಂದಿರ ಪಿತ್ರಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ.

2. ಪ್ರತಿವಾದಿಯರು ವಾದಿಯರ ತಾತನ ಅಣ್ಣ ತಮ್ಮಂದಿರ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಯಾರು ಯಾರು ಎಷ್ಟು ಎಷ್ಟು ಎಕರೆ ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು ಉಜ್ಜಿನಪ್ಪರವರ ಜಮೀನನ್ನು ಉಳುಮೆ ಮಾಡುವುದರಿಂದ ಉಜ್ಜಿನಪ್ಪರವರು 5 ಎಕರೆ ಸಾಗುವಳಿ ಮಾಡುತ್ತಿರುವುದು ಮಾತ್ರ ನನಗೆ ತಿಳಿದಿರುತ್ತದೆ. ದಾವಾ ಸ್ವತ್ತಿನಲ್ಲಿ ಉಜ್ಜಿನಪ್ಪರವರನ್ನು ಹೊರತುಪಡಿಸಿ ಅವರ ಅಣ್ಣ ತಮ್ಮಂದಿರು ಸಾಗುವಳಿ ಮಾಡುತ್ತಾರೆ ಹೆಸರು ಹಾಗೂ ವಿಸ್ತೀರ್ಣ ನನಗೆ ಗೊತ್ತಿಲ್ಲ. ಉಜ್ಜಿನಪ್ಪರವರು ಸಾಗುವಳಿ ಮಾಡುತ್ತಿರುವ 5 ಎಕರೆ ಜಮೀನು ಸದರಿಯವರ ಹೆಸರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ತನ್ನ ತಾತಂದಿರು ಮಾಡಿಕೊಂಡು ಪಾಲುವಿಭಾಗದಂತೆ ಸರ್ವೇ ನಂ.23/2 ರ ಸ್ವತ್ತಿನಲ್ಲಿ 4 ಭಾಗ ಮಾಡಿಕೊಂಡು ಅನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3. ಪ್ರತಿವಾದಿಯರು ವಾದಿಯರ ಜಮೀನಿಗೆ ಅಗಸ್ಟ್-2021 ನೇ ಸಾಲಿನಲ್ಲಿ ಅತೀಕ್ರಮ ಪ್ರವೇಶ ಮಾಡಿರುತ್ತಾರೆ. ಸದರಿ ಅತೀಕ್ರಮ ಪ್ರವೇಶವನ್ನು ದೊಡ್ಡಗೌಡರ ಕೆಂಚಪ್ಪ, ಬಾಲಪ್ಪ, ಸಿದ್ದಲಿಂಗೇಶ್ವರ ಮತ್ತು ಇನ್ನು ಕೆಲವು ವ್ಯಕ್ತಿಗಳು ಬಂದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ಗ್ರಾಮ ಕುರುಡಿಹಳ್ಳಿ, ಸದರಿ ಸಮಯದಲ್ಲಿ ಕುರುಡಿಹಳ್ಳಿ ಗ್ರಾಮಸ್ಥರಾದ ಮಂಜುನಾಥ ಮತ್ತು ಉಜ್ಜಿನಪ್ಪ ಇದ್ದರು. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆಯ ದಿನಾಂಕ ನೆನಪಿಲ್ಲ. ಪ್ರತಿವಾದಿಯರು ವಾದಿಯರ ಜಮೀನಿಗೆ ಅಗಸ್ಟ್-2021 ನೇ ಸಾಲಿನಲ್ಲಿ ಅತೀಕ್ರಮ ಪ್ರವೇಶ ಮಾಡಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯರು ಒಂದೇ ಗ್ರಾಮಸ್ಥರು ಎಂದರೆ ಸರಿ. ಪ್ರತಿವಾದಿಯರು ಎಲ್ಲಿ ವಾಸ ಇದ್ದಾರೆ ಎಂದು

ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸಂಬಂಧ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯಾಗಿದೆ ಎನ್ನಲಾದ ದಿನದಂದು ನಾನು ಕೆಲಸಕ್ಕೆ ಹೋಗಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.